# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2023**

ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್.<br>(ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : **17.03.2022.**

ಉತ್ತರಿಸಬೇಕಾದ ಸಚಿವರು : ಮುಖ್ಯಮಂತ್ರಿಯವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ನಗರದ ಕತ್ರಿಗುಪ್ಪೆ ಗ್ರಾಮದ ಸ.ನಂ.15 ರಲ್ಲಿ ಸಾರ್ವಜನಿಕ ಉಪಯೋಗಕ್ಕೆ ನಿವೇಶನವನ್ನು ಕಾಯ್ದಿರಿಸಲಾಗಿದೆಯೇ; ಹಾಗಿದ್ದಲ್ಲಿ ಈ ನಿವೇಶನದ ವಿಸ್ತೀರ್ಣ ಎಷ್ಟು;</td><td>ಕತ್ರಿಗುಪ್ಪೆ ಗ್ರಾಮದ ಸ.ನಂ.15 ಕ್ಕೆ ಸಂಬಂಧಿಸಿದ ನಕ್ಷೆಯಂತೆ ಸಿ.ಎ. ನಿವೇಶನಗಳ ವಿವರ ಈ ಕೆಳಕಂಡಂತೆ ಇರುತ್ತದೆ:-
<table>
<tr><th rowspan="2">ಕ್ರಸಂ</th><th rowspan="2">ವಿಸ್ತೀರ್ಣ (ಚ.ಮೀ)</th><th colspan="4">ಚಕ್ಕುಬಂದಿ</th></tr>
<tr><th>ಉತ್ತರ</th><th>ದಕ್ಷಿಣ</th><th>ಪೂರ್ವ</th><th>ಪಶ್ಚಿಮ</th></tr>
<tr><td>1</td><td>3660.00</td><td>ನಿ.ಸ.451, 452 & 2ನೇ ಅಡ್ಡರಸ್ತೆ</td><td>4ನೇ ಅಡ್ಡರಸ್ತೆ</td><td>ಯಡಿಯೂರು ನಾಗಸಂದ್ರ ಸ.ನಂ.36</td><td>1ನೇ ಮುಖ್ಯರಸ್ತೆ</td></tr>
<tr><td>2</td><td>1365.00</td><td>18.3 ಮೀ. ಅಗಲದ ರಸ್ತೆ</td><td>1ನೇ "ಎ" ಅಡ್ಡರಸ್ತೆ</td><td>18.3 ಮೀ ಅಗಲದ ರಸ್ತೆ</td><td>2ನೇ ಮುಖ್ಯರಸ್ತೆ</td></tr>
<tr><td>3</td><td>2811.00</td><td>ಸುಂಕೇನಹಳ್ಳಿ ಸ.ನಂ.</td><td>4ನೇ ಅಡ್ಡರಸ್ತೆ</td><td>5ನೇ ಮುಖ್ಯರಸ್ತೆ</td><td>ವಿದ್ಯಾಪೀಠ ಪ್ರದೇಶ ಸ.ನಂ.14</td></tr>
</table></td></tr>
<tr><td>ಆ)</td><td>ಈ ನಿವೇಶನದಲ್ಲಿ ಕೆಲವು ವ್ಯಕ್ತಿಗಳು ಖಾಸಗಿ ವಾಹನ ನಿಲ್ದಾಣಕ್ಕೆ ಅವಕಾಶ ಕಲ್ಪಿಸಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಈ ಸಿ.ಎ ನಿವೇಶನಗಳಲ್ಲಿ ಕ್ರಮ ಸಂಖ್ಯೆ. 1 ರಲ್ಲಿರುವ ಸಿ.ಎ. ನಿವೇಶನವು ಗ್ಯಾಸ್ ಗೋಡೌನ್‌ಗೆ ಹಂಚಿಕೆಯಾಗಿರುತ್ತದೆ.<br>ಕ್ರಮ ಸಂಖ್ಯೆ. 3 ರಲ್ಲಿರುವ ಸಿ.ಎ.ನಿವೇಶನವು ವಿದ್ಯಾಪೀಠ ಸಂಸ್ಥೆಗೆ ಲೀಸ್ ಆಧಾರ ಮೇಲೆ ಹಂಚಿಕೆಯಾಗಿರುತ್ತದೆ.<br>ಕ್ರಮ ಸಂಖ್ಯೆ. 2 ರಲ್ಲಿರುವ ಸಿ.ಎ.ನಿವೇಶನದಲ್ಲಿ ತುಂಬ ಹಳೆ ಗುಜರಿ ವಾಹನಗಳನ್ನು ನಿಲ್ಲಿಸಿದ್ದು, ಅನುಪಯುಕ್ತ ಸೆಂಟ್ರಿಂಗ್ ಸಾಮಾನುಗಳನ್ನು ಶೇಖರಿಸಲಾಗಿರುತ್ತದೆ. ಈ ನಿವೇಶನದಲ್ಲಿ ಕೆಲವು ವ್ಯಕ್ತಿಗಳು ಖಾಸಗಿ ವಾಹನ ನಿಲ್ದಾಣಕ್ಕೆ ಅವಕಾಶ ಕಲ್ಪಿಸಿ ಹಣ ವಸೂಲಿ ಮಾಡುತ್ತಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.</td></tr>
<tr><td>ಇ)</td><td>ಸದರಿ ಸಿ.ಎ ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲು ನ್ಯಾಯಾಲಯದ ಆದೇಶವಿದ್ದರೂ ಸಹ ಬಿ.ಡಿ.ಎ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು? (ಅಧಿಕಾರಿಗಳ ಹೆಸರು ಮತ್ತು ಹುದ್ದೆಯೊಂದಿಗೆ ಸಂಪೂರ್ಣ ವಿವರ ನೀಡುವುದು)</td><td>ಸದರಿ ಸಿ.ಎ ನಿವೇಶನ ಮೇಲೆ ಮಾನ್ಯ ನ್ಯಾಯಾಲಯದ ಸಂಖ್ಯೆ.OS No.1738/2009 ರಲ್ಲಿ ದಾವೆ ದಾಖಲಾಗಿದ್ದು, ದಾವೆ ತೀರ್ಪು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪರವಾಗಿ ಬಂದಿರುತ್ತದೆ. ಅದರಂತೆ ಅಂದಿನ ಆಯುಕ್ತರ ಆದೇಶ ಸಂಖ್ಯೆ.3444, ದಿನಾಂಕ:29.07.2015 ರಂತೆ ಅಭಿಯಂತರರ ಅಧಿಕಾರಿ-1 ರವರು ತೆರವು ಕಾರ್ಯಾಚರಣೆಗೆ ಆದೇಶ ನೀಡಿದ್ದು, ದಿನಾಂಕ:10.09.2015 ರಂದು ಕಾರ್ಯಾಚರಣೆಯನ್ನು ನಿಗಧಿಪಡಿಸಿ, ಪ್ರಾಧಿಕಾರದ ವಿಶೇಷ ಜಾಗೃತ ದಳದ ಪೋಲಿಸ್ ಆಧೀಕ್ಷಕರಿಗೆ ಸೂಕ್ತ ರಕ್ಷಣೆ ವ್ಯವಸ್ಥೆ ನೀಡಲು ಕೋರಲಾಗಿತ್ತು.<br>ಆದರೆ ಸದರಿ ಸ್ಥಳದ ಅನಧಿಕೃತದಾರರಾದ ಶ್ರೀ ಇ.ಗಣೇಶ್ ರವರು ದಾವೆ ಸಂಖ್ಯೆ. RFA No.173/2015ರಂತೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ತಾತ್ಕಾಲಿಕ ತಡೆಯಾಜ್ಞೆ ಆದೇಶ ಪಡೆದಿದ್ದು, <u>"Ad-interim injunction as prayed for, till the next date</u>" ಎಂದು ದಿನಾಂಕ:10.04.2015 ರಂದು ನಿರ್ದೇಶನ ನೀಡಲಾಗಿತ್ತು. ಆದಕಾರಣ ತೆರವು ಕಾರ್ಯಚರಣೆ ಸಂಬಂಧ ಯಾವುದೇ ಕ್ರಮ ಕೈಗೊಳ್ಳಲು ಬರುವುದಿಲ್ಲವೆಂದು ಪ್ರಾಧಿಕಾರದ ಆರಕ್ಷಕ ನಿರೀಕ್ಷಕರು ತಿಳಿಸಿದ ಕಾರಣ ತೆರವು ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು.</td></tr>
</table>

ಮುಂದುವರೆದು ಸದರಿ ದಾವೆಯು ಪ್ರಸ್ತುತ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ನಿವೇಶನದ ಸ್ಥಳದಲ್ಲಿ ಇರುವ ಹಳೆ ಗುಜರಿ ವಾಹನಗಳನ್ನು ಮತ್ತು ಅನುಪಯುಕ್ತ ಸೆಂಟ್ರಿಂಗ್ ವಸ್ತುಗಳ ತೆರವು ಕಾರ್ಯಾಚರಣೆಗೆ ಕ್ರಮಕೈಗೊಳ್ಳಲಾಗಿರುವುದಿಲ್ಲ.

**2015 ರಿಂದ ಕಾರ್ಯನಿರ್ವಹಿಸಿರುವ ಅಧಿಕಾರಿಗಳ ಹೆಸರು ಮತ್ತು ಹುದ್ದೆಯ ವಿವರ ಈ ಕೆಳಕಂಡಂತಿದೆ:**

| ಕ್ರಮ ಸಂ | ಅಧಿಕಾರಿಗಳ ಹೆಸರು | ಹುದ್ದೆ | ಕಾರ್ಯನಿರ್ವಹಿಸಿದ ದಿನಾಂಕ: |
|---|---|---|---|
| 1 | ಎನ್.ವಿಶ್ವನಾಥ್ | ಸಹಾಯಕ ಅಭಿಯಂತರರು | 15.08.2013 ರಿಂದ 02.01.2016 ರವರೆಗೆ |
| 2 | ದೇವರಾಜು | ಸಹಾಯಕ ಅಭಿಯಂತರರು | 15.11.2016 ರಿಂದ 23.10.2019 ರವರೆಗೆ |
| 3 | ಗೋವಿಂದರಾಜು | ಸಹಾಯಕ ಅಭಿಯಂತರರು | 09.11.2015 ರಿಂದ 30.06.2021 ರವರೆಗೆ |
| 4 | ಆರ್.ಪ್ರಶಾಂತ್ | ಸಹಾಯಕ ಅಭಿಯಂತರರು | 30.06.2021 ರಿಂದ 20.09.2021 ರವರೆಗೆ |
| 5 | ವೈ.ಆರ್. ಬಸವರಾಜು | ಸಹಾಯಕ ಅಭಿಯಂತರರು | 21.09.2021 ರಿಂದ ಇಲ್ಲಿಯವರೆಗೆ |
| 6 | ಹೆಚ್.ಎಸ್. ಮಂಜುನಾಥ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 17.05.2012 ರಿಂದ 09.04.2015 ರವರೆಗೆ |
| 7 | ಹೊನ್ನರಾಜು | ಸಹಾಯಕ ಕಾರ್ಯಪಾಲಕ ಅಭಿಯಂತರರು | 09.04.2015 ರಿಂದ 18.07.2018 ರವರೆಗೆ |
| 8 | ಮೊಹಮ್ಮದ್ ಅಜ್ಮಲ್ ಅರೀಫ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 18.07.2018 ರಿಂದ 04.02.2021 ರವರೆಗೆ |
| 9 | ಎಸ್.ಪಿ.ಗಂಗಾಧರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 04.02.2021 ರಿಂದ ಇಲ್ಲಿಯವರೆಗೆ |
| 10 | ಎಲ್. ರಘು | ಕಾರ್ಯಪಾಲಕ ಅಭಿಯಂತರರು | 25.05.2013 ರಿಂದ 23.02.2017 ರವರೆಗೆ |
| 11 | ಪಿ.ಡಿ. ಕುಮಾರ್ | ಕಾರ್ಯಪಾಲಕ ಅಭಿಯಂತರರು | 23.02.2017 ರಿಂದ 20.01.2018 ರವರೆಗೆ |
| 12 | ಗೋಪಾಲ ಕೃಷ್ಣ | ಕಾರ್ಯಪಾಲಕ ಅಭಿಯಂತರರು | 20.01.2018 ರಿಂದ 31.10.2019 ರವರೆಗೆ |
| 13 | ಚುಂಚೇಗೌಡ | ಕಾರ್ಯಪಾಲಕ ಅಭಿಯಂತರರು | 01.11.2019 ರಿಂದ 28.02.2022 ರವರೆಗೆ |
| 14 | ಹೆಚ್.ಸಿ. ಸುರೇಶ್ | ಕಾರ್ಯಪಾಲಕ ಅಭಿಯಂತರರು | 01.03.2022 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. |

ನಅಇ 103 ಬೆಂಭೂಸ್ವಾ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ